ಕರ್ನಾಟಕ ಸರ್ಕಾರ
ತಾಲೂಕಾ ಆಸ್ಪತ್ರೆ, ಯಲ್ಲಾಪುರ
ತಾ॥ ಯಲ್ಲಾಪುರ ಜಿಲ್ಲೆ: ಉತ್ತರ ಕನ್ನಡ - 581 359
ದೂರವಾಣಿ ಸಂಖ್ಯೆ: 08419-261103 E-mail: amoth.yellapur@gmail.com

ನಂ: ತಾ.ಆ.ಯ: ಟೆಂಡರ್: 216 /2025-26 ದಿನಾಂಕ: 17-09-2026

## ಕಾರಣ ಕೇಳುವ ನೋಟಿಸ್

ವಿಷಯ: ತಾಲೂಕಾ ಆಸ್ಪತ್ರೆ, ಯಲ್ಲಾಪುರ, ಜಿಲ್ಲೆ: ಉತ್ತರ ಕನ್ನಡ ಇಲ್ಲಿಯ 2026-2027 ನೇ ಸಾಲಿಗೆ ಹೊರ ಗುತ್ತಿಗೆ ಆಧಾರದ ಗ್ರೂಪ್ "ಡಿ"/ ನಾನ್-ಕ್ಲಿನಿಕಲ್ ಟೆಂಡರ ಸಿಬ್ಬಂದಿಗಳ ವೇತನದಲ್ಲಿ ಕಂಡು ಬಂದಿರುವ ವ್ಯತ್ಯಾಸದ ಕುರಿತು.

ಉಲ್ಲೇಖ: ಈ ಕಾರ್ಯಾಲಯದ ಟೆಂಡರ್‌ನ ಸಮ ಸಂಖ್ಯೆ ಆದೇಶ ದಿನಾಂಕ: 29-06-2026

******

ಈ ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2026-2027 ನೇ ಸಾಲಿಗೆ ತಾಲೂಕಾ ಆಸ್ಪತ್ರೆ, ಯಲ್ಲಾಪುರ ಜಿಲ್ಲೆ: ಉತ್ತರ ಕನ್ನಡ ಇಲ್ಲಿಗೆ ಗ್ರೂಪ್ "ಡಿ" ಮತ್ತು ನಾನ್-ಕ್ಲಿನಿಕಲ್ ಸಿಬ್ಬಂದಿಯನ್ನು ಪೂರೈಸಲು ಕರೆಯಲಾದ ಇ-ಟೆಂಡರ್ ಪ್ರಕ್ರಿಯೆಯಲ್ಲಿ ತಮ್ಮ ಸಂಸ್ಥೆ ಲಾಟರಿ ಡ್ರಾ (ಚೀಟಿ ಎತ್ತುವ) ಪ್ರಕ್ರಿಯಲ್ಲಿ ಯಶಸ್ವಿ ಬಿಡ್‌ದಾರರಾಗಿ ಆಯ್ಕೆ ಆಗಿರುವ ಪ್ರಯುಕ್ತ ತಮ್ಮ ಸಂಸ್ಥೆಯವರಿಗೆ ದಿನಾಂಕ: 01-07-2026 ರಿಂದ 31-03-2027 ರವರೆಗೆ ಅಥವಾ ಮುಂದಿನ ಸಾಲಿನ ಸದರಿ ಟೆಂಡರ್ ಆದೇಶವಾಗುವವರೆಗೆ ಶೇಕಡಾ 3% ಸೇವಾ ಶುಲ್ಕದೊಂದಿಗೆ ನಿಗದಿತ ನಿಬಂಧನೆಗಳು ಹಾಗೂ ಷರತ್ತುಗಳಿಗೊಳಪಟ್ಟು 2026-27'ನೇ ಸಾಲಿನಲ್ಲಿ ಕಾರ್ಮಿಕ ಇಲಾಖೆಯಿಂದ ನಿಗದಿಪಡಿಸಿರುವ ಅನುಬಂಧ (1) ಮತ್ತು (2) ರಲ್ಲಿ ವಿವರಿಸಿರುವ ವೇತನ ದರದಂತೆ 10 ನಾನ್-ಕ್ಲಿನಿಕಲ್ ಸಿಬ್ಬಂದಿಗಳು ಮತ್ತು 10 ಗ್ರೂಪ್-ಡಿ ಸಿಬ್ಬಂದಿಗಳು ಸೇರಿದಂತೆ ಒಟ್ಟು 20 ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಆದೇಶ ನೀಡಲಾಗಿರುತ್ತದೆ.

ಅದರಂತೆ ಜುಲೈ-2026 ನೇ ಮಾಹೆಯಿಂದ ತಮ್ಮ ಸಂಸ್ಥೆಯಿಂದ ಉಲ್ಲೇಖಿತ ಆದೇಶದಲ್ಲಿ ನಿಗದಿಪಡಿಸಿರುವ ಪ್ರಕಾರ ನಿವ್ವಳ ಮೊತ್ತ ಪ್ರತಿ ಮಾಹೆ ಗ್ರೂಪ್ "ಡಿ" ರವರಿಗೆ ರೂಪಾಯಿ: 13,949=67 ರಂತೆ ಹಾಗೂ ನಾನ್-ಕ್ಲಿನಿಕಲ್ ಸಿಬ್ಬಂದಿಯವರಿಗೆ ರೂಪಾಯಿ: 16,807=42 ರಂತೆ ವೇತನವನ್ನು ನೀಡಬೇಕಾಗಿರುತ್ತದೆ. (ಲಗತ್ತಿಸಿದೆ)

ಆದರೆ ತಮ್ಮ ಸಂಸ್ಥೆಯಿಂದ ಜುಲೈ-2026 ಹಾಗೂ ಅಗಸ್ಟ್-2026 ನೇ ಮಾಹೆಗಳ ವೇತನವನ್ನು ಗ್ರೂಪ್ "ಡಿ" ರವರಿಗೆ ರೂಪಾಯಿ: 13,949=00 ರಂತೆ ಹಾಗೂ ನಾನ್-ಕ್ಲಿನಿಕಲ್ ಸಿಬ್ಬಂದಿಯವರಿಗೆ ಕೂಡ ರೂಪಾಯಿ: 13,949=00 ರಂತೆ ಸದರಿ ಸಿಬ್ಬಂದಿಯವರ ಬ್ಯಾಂಕ ಖಾತೆಗಳಿಗೆ ಜಮೆ ಮಾಡಿದ್ದು, (ಲಗತ್ತಿಸಿದೆ) ಸದರಿ ಮಾಹೆಗಳ ವೇತನ ನೀಡುವಲ್ಲಿ ವ್ಯತ್ಯಾಸ ಕಂಡು ಬಂದಿರುತ್ತದೆ. ಆ ಪ್ರಯುಕ್ತ ಸದರಿ ವೇತನ ವ್ಯತ್ಯಾಸದ ಮೊತ್ತವನ್ನು ಕೂಡಲೇ ಸಂಬಂಧಿಸಿದ ಸಿಬ್ಬಂದಿಗಳಿಗೆ ಬ್ಯಾಂಕ ಖಾತೆಗೆ ಜಮಾ ಮಾಡಿ, ಅದರ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಿ ಈ ಕುರಿತು ತಮ್ಮ ಲಿಖಿತ ಹೇಳಿಕೆಯನ್ನು ಈ ನೋಟಿಸ್ ತಲುಪಿದ ಮೂರು (03) ದಿನಗಳ ಒಳಗಾಗಿ ನೀಡಲು ಸೂಚಿಸಿದೆ.

ಆಡಳಿತ ವೈದ್ಯಾಧಿಕಾರಿಗಳು
ತಾಲೂಕಾ ಆಸ್ಪತ್ರೆ, ಯಲ್ಲಾಪುರ
ಜಿಲ್ಲೆ: ಉತ್ತರ ಕನ್ನಡ - 581359

ರಿಗೆ,

ಶ್ರೀ: ಮಹೇಶ ಲಕ್ಷ್ಮಣ ಗುಮಚಿ, ಮಾನವ ಸಂಪನ್ಮೂಲ ಗುತ್ತಿಗೆದಾರರು,
ಬಸ್ ನಿಲ್ದಾಣದ ಹತ್ತಿರ, ಶಿವಶರಣ ರವದಿ ಕಾಂಪ್ಲೆಕ್ಸ್,
ತಾಲೂಕು : ಹುಕ್ಕೇರಿ, ಜಿಲ್ಲೆ: ಬೆಳಗಾವಿ - 591309

Scanned with OKEN Scanner

ಪ್ರತಿಯನ್ನು ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

1) ಸನ್ಮಾನ್ಯ ಶಾಸಕರು. ಯಲ್ಲಾಪುರ ಹಾಗೂ ಮುಂಡಗೋಡ ಮತಕ್ಷೇತ್ರ, ಯಲ್ಲಾಪುರ ರವರಿಗೆ
2) ಮಾನ್ಯ ಜಿಲ್ಲಾಧಿಕಾರಿಗಳು. ಉತ್ತರ ಕನ್ನಡ ಜಿಲ್ಲೆ, ಕಾರವಾರ ರವರಿಗೆ
3) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಉತ್ತರ ಕನ್ನಡ ಜಿಲ್ಲೆ, ಕಾರವಾರ ರವರಿಗೆ
4) ಮಾನ್ಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ, ಕಾರವಾರ ರವರಿಗೆ
5) ತಾಲೂಕಾ ಆರೋಗ್ಯಾಧಿಕಾರಿಗಳು, ಯಲ್ಲಾಪುರ (ಉ.ಕ) ರವರಿಗೆ

ಆಡಳಿತ ವೈದ್ಯಾಧಿಕಾರಿಗಳು
ತಾಲೂಕಾ ಆಸ್ಪತ್ರೆ, ಯಲ್ಲಾಪುರ
ಜಿಲ್ಲೆ: ಉತ್ತರ ಕನ್ನಡ - 581359

Scanned with OKEN Scanner